595 (983) ಶ್ರೀ ಸಿದ್ದು ಸವದಿ (ಜಮಖಂಡಿ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಸರಿಪಡಿಸಲಾಗುವುದು;

ಇ) ಇದರಿಂದಾಗಿ ಗ್ರಾಮೀಣ ಮಕ್ಕಳಿಗೆ ಅನ್ಯಾಯವಾಗುವುದಿಲ್ಲವೇ;

ಈ) ಜಮಖಂಡಿ ತಾಲ್ಲೂಕಿನಲ್ಲಿ ಎಷ್ಟು ಸಿಬ್ಬಂದಿ ಕಡಿಮೆ ಇದೆ ಎಂಬುದನ್ನು ಸಂಪೂರ್ಣ ವಿವರ ನೀಡುವುದು?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) 558 ಸರ್ಕಾರಿ ಪ್ರೌಢ ಶಾಲೆ ಮುಖ್ಯ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿಗಾಗಿ ದಿನಾಂಕ : 25-11-2006 ರಂದು ಲೋಕ ಸೇವಾ ಆಯೋಗದ ಮೂಲಕ ಅಧಿಸೂಚನೆ ಹೊರಡಿಸಲಾಗಿದೆ. ಹಾಗೂ 2ನೇ ಹಂತದಲ್ಲಿ 530 ಮುಖ್ಯ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ : 25-06-2007 ರಂದು ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರೌಢ ಶಾಲಾ ಸಹ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ : ಇಡಿ 143 ಯೋಯೋಕ 2007, ದಿನಾಂಕ : 09-05-2007 (ಇಡಿ 78 ಸ್ವೀಮರ (ಯುನಿಕ್) 07, ದಿನಾಂಕ : 09-05-2007) ಮತ್ತು ಇಡಿ 143 ಯೋಯೋಕ 2007, ದಿನಾಂಕ : 24-05-2007 (ಇಡಿ 78 ಸ್ವೀಮರ (ಯುನಿಕ್) 07, ದಿನಾಂಕ : 24-05-2007 (ರಲ್ಲಿ ಅನುಮತಿ ನೀಡಲಾಗಿದೆ.

ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ 250 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಮತ್ತು 978 ದ್ವಿತೀಯ ದರ್ಜೆ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ : 05-03-2007 ಮತ್ತು 07-07-2007 ರಂದು ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಉಳಿದಂತೆ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ತುಂಬಲಾಗುತ್ತಿದೆ.

ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ಅನುಮೋದಿತ ಬಡ್ತಿಯಿಂದ ಉಂಟಾದ 282 ಬೋಧಕ ಹುದ್ದೆಗಳಿಗೆ ನೇಮಕ ಮಾಡಲು ಸರ್ಕಾರದ ಆದೇಶ ಸಂಖ್ಯೆ : ಇಡಿ 46 ಎಸ್‌ಇಪಿ 2006, ದಿನಾಂಕ : 12-08-2006 ರನ್ವಯ ಅರ್ಹತೆ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ.

ಸರ್ಕಾರವು ಈಗಾಗಲೇ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ 205 ಉಪನ್ಯಾಸಕರುಗಳಿಗೆ ಪ್ರಾಂಶುಪಾಲರಾಗಿ ಪದೋನ್ನತಿ ನೀಡಲು ನಿರ್ಣಯಿಸಿದ್ದು, ಶೀಘ್ರವಾಗಿ ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು. ದಿನಾಂಕ :12-07-2007 ಮತ್ತು 13-07-2007 ರಂದು ಸುಮಾರು 1200 ಪ್ರೌಢ ಶಾಲಾ ಸಹ ಶಿಕ್ಷಕರುಗಳಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಿದ್ದು, ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ. ಹಾಗೆಯೇ ಈಗಾಗಲೇ 2175 ಉಪನ್ಯಾಸಕರನ್ನು ಆಯ್ಕೆ ಮಾಡುವಂತೆ ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಆಯ್ಕೆ ಪಟ್ಟಿ ಬಂದ ನಂತರ ಹುದ್ದೆಗಳನ್ನು ತುಂಬಲಾಗುವುದು.

ಇ) ಕ್ರಮ ಸಂಖ್ಯೆ : 'ಆ' ರಲ್ಲಿ ಉತ್ತರ ನೀಡಿರುವಂತೆ ಹುದ್ದೆಗಳನ್ನು ತುಂಬಲಾಗುತ್ತಿದ್ದು, ಈ ಮಧ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರನ್ನು ನಿಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಈ) ಸರ್ಕಾರಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ 30 ಬೋಧಕ ಹುದ್ದೆಗಳು ಹಾಗೂ 14 ಬೋಧಕೇತರ ಹುದ್ದೆಗಳು ಖಾಲಿ ಇರುತ್ತವೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಒಟ್ಟು 26 ಉಪನ್ಯಾಸಕರ ಹಾಗೂ 07 ಬೋಧಕೇತರ ಸಿಬ್ಬಂದಿಗಳ ಕೊರತೆ ಇದೆ.

596 (984) ಶ್ರೀ ಸಿದ್ದು ಸವದಿ (ಜಮಖಂಡಿ) :- ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಜೀವನಾಡಿಯಾದ ಕೃಷ್ಣಾ ನದಿಯು ಪ್ರತೀ ಬೇಸಿಗೆಯಲ್ಲಿ ಬತ್ತಿ ಹೋಗುವುದರಿಂದ ಬಾಂದಾರದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;